**ಇಂದು ದಿನಾಂಕಃ 30-11-2024 ಸಾಕ್ಷಿ ಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಎದುರುದಾರರ ಪರವಾಗಿ ಶ್ರೀ SSM ವಕೀಲರಿಂದಃ-**

ನಾನು ಮತ್ತು ಎದುರುದಾರ ಸಂಬಂಧಿಕರಲ್ಲಿಯೇ ಮದುವೆಯಾಗಿದ್ದೇವೆ ಎಂದರೆ ಸರಿ. ನನ್ನ ತಾಯಿ ಮತ್ತು ತಂದೆ ಕೂಲಿಕೆಲಸ ಮಾಡುತ್ತಾರೆ. ನನ್ನ ತಂದೆ ತಾಯಿಗೆ 8 ಎಕರೆ ಜಮೀನು ಇದೆ. ನನ್ನ ತಂದೆ ತಾಯಿಗೆ ಒಟ್ಟು 5 ಮಕ್ಕಳು ಇದ್ದು ಅವರಲಿ ನಾವು 4 ಹೆಣ್ಣುಮಕಳು ಇದ್ದೇವೆ ಮತ್ತು ಒಬ್ಬ ಅಣ್ಣನಿದಾನೆ. ನನ್ನ ಎಲ್ಲಾ ಸಹೋದರ ಸಹೋದರಿಯರ ಮದುವೆ ಆಗಿದೆ ಎಂದರೆ ಸರಿ. ನನ್ನ ತಂದೆ ತಾಯಿಗೆ ಮೇಲೆ ಹೇಳಿರುವ ಜಮೀನಿನಿಂದ 1.5 ರಿಂದ 2 ಲಕ್ಷದ ವರೆಗೆ ವಾರ್ಷಿಕ ಆದಾಯ ಬರುತ್ತದೆ. ನನ್ನ ಅಕ್ಕಳ ಮದುವೆ ಸಮಯಕ್ಕೆ 5 ತೊಲೆ ಬಂಗಾರ ಮತ್ತು ಹಣವನ್ನು ವರದಕ್ಷಿಣೆಯಾಗಿ ನೀಡಿರುತೇವೆ. ನನ್ನ ಮದುವೆ ಸಮಯಕ್ಕೆ 6 ಲಕ್ಷ ನಗದು ಹಣ ಮತ್ತು 6 ತೊಲೆ ಬಂಗಾರ ಎದುರುದಾರನಿಗೆ ನೀಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ವರದಕ್ಷಿಣೆ ಕೊಟ್ಟಿಲ್ಲ ಆದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ಹಣ ಮತು ಬಂಗಾರ ತೆಗೆದುಕೊಂಡು ಬರಲು ನನಗೆ ಕಿರುಕುಳ ನೀಡಿ ಮನೆಯಿಂದ ಹೊರಗೆ ಹಾಕಿರವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಸದರಿ ಹಣ ಮತು ಬಂಗಾರ ಎದುರುದಾರ ನನಗೆ ತೆಗೆದುಕೊಂಡು ಬರಲು ಹೇಳಿದ್ದಾನೆ ಎಂದು ನನಗೆ ನೆನಪಿಲ್ಲ. ಎದುರುದಾರ ನನಗೆ ಬಸವರಾಜ ಗೌಡರು, ಅಮೃತ ಬೇಮಳಗಿ, ರಾಜು ಹುಮನಾಬಾದ ರವರ ಸಮಕ್ಷಮ ನನಗೆ ಮನೆಯಿಂದ ಹೊರಹಾಕಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ಬಸವರಾಜ ರವರ ಮುಂದೆ ನನಗೆ ಕಲ್ಲಿನಿಂದ ಹಣೆಯ ಮೇಲೆ ಹೊಡೆದಿರುತ್ತಾನೆ. ಸಾಕ್ಷಿ ತಮ್ಮ ಹಣೆಯಮೇಲೆ ಇರುವ ಗಾಯದ ಕಲೆಯನ್ನು ತೋರಿಸುತ್ತಾರೆ.

ಎದುರುದಾರ ಹೊಡೆಬಡೆ ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ನನ್ನ ತಂದೆ ತಾಯಿಗೆ ಕರೆ ಮುಖಾಂತರ ತಿಳಿಸಿದ್ದೆನೆ. ಯಾವ ದಿನಾಂಕಂದು ತಿಳಿಸಿದ್ದೇನೆ ಎಂದು ನನಗೆ ನೆನಪಿಲ್ಲ. ಯಾವುದೇ ಘಟನೆ ಆಗಿಲ್ಲ ಮತ್ತು ನಾನು ನನ್ನ ತಂದೆ ತಾಯಿಗೆ ಘಟನೆ ಬಗ್ಗೆ ತಿಳಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ವಿರುದ್ದ ದೂರು ನೀಡಿರುವ ಬಗ್ಗೆ ಮತ್ತು ಎದುರುದಾರ ಪೊಲಿಸ ಠಾಣೆಯಲ್ಲಿ ನನಗೆ ಕರೆದುಕೊಂಡು ಹೋಗಲು ಬಂದಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ಹೆಸರಿನಲ್ಲಿ ಖಾಲಿ ನಿವೇಶನ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ಹೆಸರಿಲ್ಲಿರುವ ಆಸ್ತಿ ಸರ್ವೆ ನಂ. ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಪಹಣಿಯನು ನೀಡಿದ್ದೇನೆ ಎಂದು ನುಡಿಯುತ್ತಾರೆ. ಎದುರುದಾರನ ಹತ್ತಿರ ಟ್ರಾಕ್ಟರ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ ಸಂಖ್ಯೆಃ ನನಗೆ

ಹೇಳಲು ಬರುವುದಿಲ್ಲ. ಎದುರುದಾರ ತಿಂಗಳಿಗೆ 8 ಸಾವಿರ ಸಹ ಗಳಿಸುವುದಿಲ್ಲ ಮತ್ತು ಖಾಲಿ ಓಡಾಡುತ್ತಾನೆ ಎಂದರೆ ಸರಿಯಲ್ಲ. ಎದುರುದಾರ ತಿಂಗಳಿಗೆ 80 ಸಾವಿರ ಗಳಿಸುತ್ತಾನೆ ಎಂದು ದಾಖಲೆ ಸಲ್ಲಿಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಸಲಿಸಿದ್ದೇನೆ ಎಂದು ನುಡಿಯುತ್ತಾರೆ.

ನಾನು 12ನೇ ತರಗತಿವರೆಗೆ ಓದಿದ್ದು ಮತ್ತು ಎದುರುದಾರ 10ನೇ ತರಗತಿವರೆಗೆ ವಿದ್ಯಾಭಾಸ ಮಾಡಿದ ಕಾರಣ ಅದರ ದುರುದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಅಸ್ತಿವಂತರು ಎಂದರೆ ಸರಿ. ಮದುವೆಯಾದ ನಂತರ ಎದುರುದಾರನ ಜೊತೆ 5 ವರ್ಷ ವಾಸವಿದ್ದೇ. ಸಾಕ್ಷಿ ಮುಂದುವರೆದು ಈಗ 1 ವರ್ಷದಿಂದ ತವರು ಮನೆಯಲ್ಲಿದೇನೆ ಎಂದು ನುಡಿಯುತ್ತಾರೆ. ಎದುರುದಾರ ನನ್ನ ಜೊತೆ ಮದುವೆ ಮಾಡಿಕೊಳ್ಳುವ ಮೊದಲು ಬೇರೆ ಮದುವೆ ಮಾಡಿಕೊಂಡಿದ್ದ ಎಂದರೆ ಸರಿ. ಸದರಿ ಮಾದಲನೇ ಮದುವೆ ಬಗ್ಗೆ ನನಗೆ ಮತ್ತು ನನ್ನ ತಂದೆ ತಾಯಿಗೆ ಮೊದಲೇ ಗೊತ್ತಿತ್ತು ಎಂದರೆ ಸರಿ.

ಎದುರುದಾರನ ತಂದೆ ತಾಯಿಗೆ 60 ಕ್ಕೂ ಮೇಲ್ಪಟ್ಟು ವಯಸು ಆಗಿದೆ ಎಂದರೆ ಸರಿ. ಎದುರುದಾರನ ತಂದೆ ತಾಯಿಗೆ ಸೇವೆ ಮಾಡಬೇಕಾಗುತ್ತದೆ ಎಂದು ತಿಳಿದು ಎದುರುದಾರನಿಗೆ ಬಿಟ್ಟು ನನ್ನ ತವರು ಮನೆಯಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ಜೊತೆ ನಾನು 8 ತಿಂಗಳ ಕಾಲ ಇಲ್ಲದಿದ್ದರೂ ಸಹ ನನ್ನ ತಂದೆ ತಾಯಿ ಮಾತುಕೇಳಿ ಎದುರುದಾರನಿಗೆ ಸತಾಯಿಸಲು ಸುಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ನನಗೆ ತನ್ನ ಮನೆಗೆ ಕರೆದುಕೊಂಡು ಹೋಗಲು ತಯಾರಿದ್ದರಾ ಸಹ ನಾನು ಹೋಗಿರುವುಲ ಎಂದು ಸೂಚಿಸಿದಾಗ ಸಾಕ್ಷಿ ನಾನು ಹಲವಾರು ಬಾರಿ ಎದುರುದಾರನಿಗೆ ಕರೆದುಕೊಂಡು ಹೋಗಲು ಹೇಳಿದರೂ ಸಹ ಆತನೇ ನನಗೆ ಕರೆದುಕೊಂಡ ಹೋಗಲು ಸಿದ್ದನಿಲ್ಲ ಎಂದು ನುಡಿಯುತ್ತಾರೆ. ನನಗೆ ಮಕ್ಕಳು ಇಲ್ಲ ಎಂದರೆ ಸರಿ.

ನನಗೆ ಜೀವನ ನೋಡಿಕೊಳ್ಳುವ ಸಾಮರ್ಥ್ಯ ಇದ್ದರೂ ಸಹ ಮತ್ತು ಕೆಲಸ ಮಾಡುತಿದ್ದರೂ ಸಹ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದನೆ ಎಂದರೆ ಸರಿಯಲ್ಲ. ಎದುರುದಾರ ಈಗಲೂ ಸಹ ನನಗೆ ಕರೆದುಕೊಂಡು ಹೋಗಲು ತಯಾರಿದ್ದಾನೆ ಎಂದರೆ ಸಾಕ್ಷಿ ನನಗೆ ಜೀವದ ಭಯ ಇದೆ ಎಂದು ನುಡಿಯುತ್ತಾರೆ. ನನಗೆ ಎದುರುದಾರನ ಮೊದಲನೇ ಹೆಂಡತಿಯ ಬಗ್ಗೆ ಮಾಹಿತಿ ಇದ್ದರೂ ಸಹ ಮದುವೆ ಆಗಿದೇನೆ ಎಂದು ಸೂಚಿಸಿದಾಗ ಸಾಕ್ಷಿ ಎದುರುದಾರ ತನ್ನ ಮೊದಲನೇ ಹೆಂಡತಿಗೆ ಹೇಗೆ ಕೊಲೆ ಮಾಡಿದ್ದಾನೆ ಅದೇ ರೀತಿ ನಿನಗೆ ಕೊಲೆ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದು ನುಡಿಯುತ್ತಾರೆ. ಎದುರುದಾರನ ಮೊದಲನೇ ಹೆಂಡತಿ ಅನಾರೋಗ್ಯದ ಕಾರಣ ಮರಣ ಹೊಂದಿದ್ದರೂ ಸಹ ಎದುರುದಾರನ ವಿರುದ್ದ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ಮೇಲೆ ದ್ವೇಷ ಇಟ್ಟುಕೊಂಡು ಸುಳ್ಳು ಆಪಾದನೆ ಮಾಡಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**